ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು).—

(ಅ) ಏಳು ವರ್ಷಗಳಾಗಿವೆ.

(ಆ) ಎರಡು ಹಳ್ಳಿಗಳಿಗೆ ಒದಗಿಸಲಾಗಿದೆ.

(ಇ) ಯೋಜನೆಯನ್ನು ಪೂರ್ಣಗೊಳಿಸಿರುವುದರಿಂದ ಅಧಿಕಾರಿಗಳ ಮೇಲೆ ಕ್ರಮಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ. ಆರ್. ಯಾವಗಲ್.—ಮಾನ್ಯ ಅಧ್ಯಕ್ಷರೇ, ಈ ಯೋಜನೆಯಿಂದ ಎಷ್ಟು ಹಳ್ಳಿಗಳಿಗೆ ನೀರನ್ನು ಒದಗಿಸತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—೫ ಹಳ್ಳಿಗಳಿಗೆ ನೀರನ್ನು ಒದಗಿಸುವುದಕ್ಕೆ ಒಂದು ಸಂಯುಕ್ತ ಯೋಜನೆಯನ್ನು ಮಾಡಲಾಗಿತ್ತು. ಆದರೆ, ನೀರು ಸಾಲದೇ ಇದ್ದುದರಿಂದ ೨ ಹಳ್ಳಿಗಳಿಗೆ ಮಾತ್ರ ನೀರನ್ನು ಒದಗಿಸಲಾಗಿದೆ, ಉಳಿದಿರುವ ೩ ಹಳ್ಳಿಗಳಿಗೆ ನೀರು ಕೊಡುವುದಕ್ಕೆ ಏರ್ಪಾಡು ಮಾಡಲಾಗುತ್ತದೆ.

ಶ್ರೀ ಬಿ. ಆರ್. ಯಾವಗಲ್.—ಮಾನ್ಯ ಅಧ್ಯಕ್ಷರೇ, ನನ್ನ ಮೂರನೇ ಪ್ರಶ್ನೆಯಲ್ಲಿ, ಯೋಜನೆಯನ್ನು ಪೂರ್ತಿ ಮುಗಿಸದೆ, ಅರ್ಧಕ್ಕೆ ಕೈಬಿಟ್ಟಿರಲು ಕಾರಣಗಳೇನು ಹಾಗೂ ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ನಾನು ಕೇಳಿದ್ದರೆ ಯೋಜನೆಯನ್ನು ಪೂರ್ಣಗೊಳಿಸಿರುವುದರಿಂದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಉತ್ತರ ಕೊಡಲಾಗಿದೆ. ಯೋಜನೆ ಪೂರ್ತಿ ಮಾಡಲಾಗಿದ್ದಿದ್ದರೆ ೫ ಹಳ್ಳಿಗಳಿಗೂ ನೀರನ್ನು ಏಕೆ ಕೊಡುವುದಕ್ಕೆ ಆಗಿಲ್ಲ ? ಕೇವಲ ಎರಡು ಹಳ್ಳಿಗಳಿಗೆ ಮಾತ್ರ ನೀರನ್ನು ಕೊಡಲಾಗಿದೆ. ಅಂದರೆ, ಯೋಜನೆ ಇನ್ನೂ ಮುಗಿದಿಲ್ಲವೆಂದು ಅರ್ಥವಾಗುತ್ತದೆ. ಆ ಯೋಜನೆ ನಿಲ್ಲುವುದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ನನ್ನ ಹತ್ತಿರ ಇರುವ ಮಾಹಿತಿ ಪ್ರಕಾರ ಯೋಜನೆ ಮುಗಿದಿದೆ ನೀರು ಸಾಲದೇ ಇರುವುದರಿಂದ ೫ ಹಳ್ಳಿಗಳಿಗೆ ನೀರನ್ನು ಕೊಡುವುದಕ್ಕೆ ಆಗಿಲ್ಲ. ಎರಡು ಹಳ್ಳಿಗಳಿಗೆ ಮಾತ್ರ ನೀರನ್ನು ಒದಗಿಸಲಾಗಿದೆ. ಯೋಜನೆಯಲ್ಲಿ ದೋಷ ಇರಬಹುದು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇನ್ನು ಉಳಿದಿರುವ ಮೂರು ಹಳ್ಳಿಗಳಿಗೆ ನೀರನ್ನು ಒದಗಿಸುವ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಆರ್. ಯಾವಗಲ್.—ಇದನ್ನು ಆದಷ್ಟು ಬೇಗ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಈ ವರ್ಷವೇ ನೀರನ್ನು ಕೊಡೋಣ.

ಅಧ್ಯಕ್ಷರು.—ಶ್ರೀ ಎಂ. ಎಸ್. ಕೃಷ್ಣನ್‌ರವರ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ.

ಅಧ್ಯಕ್ಷರು.—ಶ್ರೀ ಜಿ. ರಾಮದಾಸ್‌ರವರು,

(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು.)

ಏರುತ್ತಿರುವ ಬೆಲೆಗಳು ಮತ್ತು ನಗರ ಸಭೆಗಳಿಗೆ ತುಟ್ಟಿಭತ್ಯೆಗಾಗಿ ಕೊಡುತ್ತಿರುವ ಪರಿಹಾರ

೧೪೬೬ ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಕಾನೂನು ಸಂಸದೀಯ ವ್ಯವಹಾರ ನಾಗರೀಕ ಸರಬರಾಜು ಮತ್ತು ಆಹಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ನಗರ ಸಭೆಗಳಿಗೆ ಎಂದಿನಿಂದ ತುಟ್ಟಿಭತ್ಯ ಪರಿಹಾರ ಧನವನ್ನು ಕೊಡಲಾಗುತ್ತಿದೆ ಹಾಗೂ ಅದರ ಮೊತ್ತವೆಷ್ಟು ?

(ಅ) ಪರಿಹಾರ ಧನವನ್ನು ಸರ್ಕಾರಿ ನೌಕರರಿಗೆ ಕೊಡುವ ತುಟ್ಟಿಭತ್ಯೆಯ ಪ್ರಮಾಣ ಏರಿದಾಗಲೆಲ್ಲ ಹೆಚ್ಚಿಸಲಾಗುತ್ತಿದೆಯೇ ?

(ಇ) ಸರ್ಕಾರಿ ನೌಕರರಿಗೆ ತುಟ್ಟಿಭತ್ಯೆ ಹೆಚ್ಚಿದರೆ ಪುರಸಭೆ ನಗರಸಭೆಗಳಿಗೆ ತಮ್ಮ ನೌಕರರಿಗಳಿಗೆ ತುಟ್ಟಿಭತ್ಯವನ್ನು ಹೆಚ್ಚಿಸುವುದು ಅನಿವಾರ್ಯವಾಗುವುದಿಲ್ಲವೇ ?

(ಈ) ಈ ದಿಸೆಯಲ್ಲಿ ಪರಿಹಾರ ಧನವನ್ನು ಹೆಚ್ಚಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಸಂಸದೀಯ ವ್ಯವಹಾರ ನಾಗರೀಕ ಸರಬರಾಜು ಮತ್ತು ಆಹಾರ ಸಚಿವರು).—

(ಅ) ೧೯೮೩-೮೪ನೇ ಸಾಲಿನಿಂದ ಕೊಡಲಾಗುತ್ತಿದೆ.

೧೯೮೩-೮೪ನೇ ಸಾಲಿಗೆ ರೂ. ೩೯,೯೭,೦೦೦.

೧೯೮೪-೮೫ನೇ ಸಾಲಿಗೆ ರೂ. ೪೧,೯೬,೯೯೯.

(ಶೇ. ೫ರಂತೆ ಹೆಚ್ಚುವರಿಸಲಾಗಿದೆ.)

೧೯೮೫-೮೬ನೇ ಸಾಲಿಗೆ ರೂ. ೪೩,೦೧,೯೧೪.

(ಶೇ. ೨½ ಯಂತೆ ಹೆಚ್ಚುವರಿಸಲಾಗಿದೆ.)

(ಆ) ಇಲ್ಲ.

(ಇ) ಉದ್ಭವಿಸುವುದಿಲ್ಲ.

(ಈ) ಮೇಲಿನ ಉತ್ತರದಿಂದ ಇದು ಉದ್ಭವಿಸುವುದಿಲ್ಲ,

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ನಗರಸಭೆಗಳಿಗೆ ಎಂದಿನಿಂದ ತುಟ್ಟಿಭತ್ಯ ಪರಿಹಾರ ಧನವನ್ನು ಕೊಡಲಾಗುತ್ತಿದೆ ಹಾಗೂ ಅದರ ಮೊತ್ತ ಎಷ್ಟು ಎಂದು ಕೇಳಿದ್ದಕ್ಕೆ, ೧೯೮೩-೮೪ನೇ ಇಸವಿಯಿಂದ ಪರಿಹಾರಧನವನ್ನು ಕೊಡಲಾಗುತ್ತಿದೆ ಎಂದೂ ಉತ್ತರಿಸಿದ್ದಾರೆ. ಇದರಲ್ಲಿ ೧೯೮೪-೮೫ನೇ ಸಾಲಿಗೆ ೪೧,೯೬,೯೯೯-ರೂಗಳು, ಇದನ್ನು ಶೇಕಡ ೫ರಂತೆ ಹೆಚ್ಚುವರಿಸಲಾಗಿದೆ ಎಂದು ಹೇಳಿದ್ದಾರೆ. ಆದೇ, ೧೯೮೫-೮೬ನೇ ಸಾಲಿಗೆ ರೂ.೪೩,೦೧,೯೧೪-ಇದನ್ನು ಶೇಕಡ ಎರಡೂವರೆಯಂತೆ ಹೆಚ್ಚುವರಿಸಲಾಗಿದೆ ಎಂದು ಹೇಳಿದ್ದಾರೆ. ಹೀಗೆ ಶೇಕಡಾವಾರು ವ್ಯತ್ಯಾಸಕ್ಕೆ ಕಾರಣ ಏನು ಎಂದು ದಯವಮಾಡಿ ಹೇಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಪರಿಹಾರ ಧನವನ್ನು ಕೊಡುವಾಗ, ಆ ಪ್ರದೇಶದ ಜನಸಂಖ್ಯೆಯ ಆಧಾರದ ಮೇಲೆ ಕೊಡುತ್ತೇವೆ. ೫೦ ಸಾವಿರಕ್ಕಿಂತ ಹೆಚ್ಚಿಗೆ ಇರುವ ಪುರಸಭೆಗಳಿಗೆ ಶೇಕಡಾವಾರು ೫ರಷ್ಟು ಹೆಚ್ಚುವರಿಸಲಾಗಿದ್ದು, ಕಡಿಮೆ ಜನಸಂಖ್ಯೆ ಇರುವ ನಗರಸಭೆಗಳಿಗೆ ಕಡಿಮೆ ಹೆಚ್ಚುವರಿಸಲಾಗಿದೆ. ಇದು ನಿಯಮಗಳ ಪ್ರಕಾರ ಇದೆ.

ಶ್ರೀ ಪಂಪಾಪತಿ.—ಮಾನ್ಯ ಮಂತ್ರಿಯವರು ಹೇಳಿದ್ದುದು ನನಗೆ ಅರ್ಥವಾಗಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಜನಸಂಖ್ಯೆಯ ಆಧಾರದ ಮೇಲೆ ಕೊಡುತ್ತೇವೆ ಎಂದು ಹೇಳಿದ್ದೇನೆ ಅಷ್ಟೇ.

ಶ್ರೀ ಪಂಪಾಪತಿ.—ನಮ್ಮಲ್ಲಿ ಜನಸಂಖ್ಯೆ ಹೆಚ್ಚಿಗೆಯೇ ಆಗಿದೆ, ಕಡಿಮೆ ಆಗಿಲ್ಲ, ೧೯೮೪-೮೫ರಲ್ಲಿ ೫ ಪರ್ಸೆಂಟ್ ಹೆಚ್ಚುವರಿ ಮಾಡಿದ್ದು, ೧೯೮೫-೮೬ನೇ ಸಾಲಿನಲ್ಲಿ ೨½ ಪರ್ಸೆಂಟ್ ಮಾಡಿದ್ದೀರಿ ಹೀಗೆ ಕಡಿಮೆ ಮಾಡಲು ಕಾರಣ ಏನು ಎಂದು ನಾನು ಕೇಳಬೇಕಾಗಿರುವುದು. ಅದರ ಜೊತೆಯಲ್ಲಿ ಹೆಚ್ಚಿಸುತ್ತೀರಾ ಎಂದು ಕೇಳಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ನಗರ ಸಭೆಗಳಿಗೆ ತುಟ್ಟಿಭತ್ಯ ಪರಿಹಾರ ಧನವನ್ನು ೧೯೮೩-೮೪ನೇ ಸಾಲಿನಿಂದ ಕೊಡಲಾಗುತ್ತಿದೆ ಎಂದು ಹೇಳಿದ್ದೇನೆ. ೫೦ ಸಾವಿರ ಜನಸಂಖ್ಯೆ ವಿರುವ ಪುರಸಭೆಗಳಿಗೆ ಶೇಕಡ ೫ ಪರ್ಸೆಂಟ್‌ನಷ್ಟು ಹೆಚ್ಚು ವರಿಸಲಾಗಿದೆ ಕಡಿಮೆ ಜನಸಂಖ್ಯೆ ಇರುವ ಪುರಸಭೆಗಳಿಗೆ ಎರಡೂವರೆ ಪರ್ಸೆಂಟ್‌ನಷ್ಟು ಹೆಚ್ಚು ವರಿಸಲಾಗಿದೆ ಎಂದು ಹೇಳಿದ್ದೇನೆ. ಆದರಲ್ಲಿ ಏನಾದರೂ ತಪ್ಪಿದ್ದರೆ. ಅದನ್ನು ತಿದ್ದಿಕೊಳ್ಳುವುದಕ್ಕೆ ಪ್ರಯತ್ನಮಾಡುತ್ತೇನೆ.

ಶ್ರೀ ಪಂಪಾಪತಿ.—ಯಾರಿಗೆ ೫ ಪರ್ಸೆಂಟ್ ಕೊಡಬೇಕಾಗಿತ್ತೋ ಅವರಿಗೆ ಕೊಡಲಿಲ್ಲ ಅವರಿಗೆ ೨½ ಪರ್ಸೆಂಟ್ ಮಾತ್ರ ಹೆಚ್ಚುವರಿ ಕೊಟ್ಟಿದ್ದೀರಿ. ಹೀಗೆ ಕಡಿಮೆ ಕೊಟ್ಟಿರುವುದನ್ನು ವಾಪಸ್ಸು ಕೊಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಇನ್ನೊಂದು ವಿಷಯ, ಮೂಲಭೂತವಾಗಿ ಈ ತುಟ್ಟಿಭತ್ಯಪರಿಹಾರಧನವನ್ನು ಸ್ಥಳೀಯಸಂಸ್ಥೆಯವರೇ ಒದಗಿಸಿಕೊಳ್ಳಬೇಕು. ಮೂಲತ: ಸರಕಾರದವರು ತಮ್ಮ ಸಿಬ್ಬಂದಿಗೆ ತುಟ್ಟಿಭತ್ಯೆಯನ್ನು ಹೆಚ್ಚಿಸಿದಾಗ, ಆದೇ ಪ್ರಮಾಣದಲ್ಲಿ ಸ್ಥಳೀಯ ಸಂಸ್ಥೆಯ ಸಿಬ್ಬಂದಿವರ್ಗದವರಿಗೂ ಕೊಡಬೇಕು. ಸಹಾಯಧನವನ್ನು ಸರಕಾರದವರು ಕೊಡುತ್ತಾರೆ. ಮೂಲತಃ ಈ ಭಾರವನ್ನು ಸ್ಥಳೀಯಸಂಸ್ಥೆಯವರೇ ಹೊರಬೇಕಾಗಿರುತ್ತದೆ. ಈ ಮಾತನ್ನು ಪ್ರಾಸ್ತಾವಿಕವಾಗಿ ಹೇಳಬಯಸುತ್ತೇನೆ.

ಶ್ರೀ ಪಂಪಾಪತಿ.—ಅಧ್ಯಕ್ಷರೇ...

ಅಧ್ಯಕ್ಷರು.—ತಾವು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಪಂಪಾಪತಿ.—ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಸರಿಯಾಗಿ ಉತ್ತರವನ್ನು ಹೇಳಿಲ್ಲ. ಒಂದೇ ಪ್ರಶ್ನೆಯನ್ನೂ ಸರಿಪಡಿಸಿ ಹೇಳುತ್ತಾ ಇದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಕೇಳಲಿ.

ಅಧ್ಯಕ್ಷರು.—ಕೇಳಿ. ತಂಡಾ ಗಲಾಟೆ ಮಾಡುತ್ತಾ ಇದ್ದೀರಿ.

ಶ್ರೀ ಪಂಪಾಪತಿ.—ಈ ದಿಸೆಯಲ್ಲಿ ಪುರಸಭೆಯವರು ಹಣ ಒದಗಿಸಿಕೊಳ್ಳಬೇಕು. ಆ ತರಹದಲ್ಲಿ ಒಂದು ಆಜ್ಞೆಯನ್ನು ಹೊರಡಿಸಿ ಏಕೆಂದರೆ ಈ ಇಲಾಖೆಯು ತಮ್ಮ ಕೈಯಲ್ಲಿ ಇದೆ. ತಾವು ಮಾಡಿದ ಆಜ್ಞೆಯ ಪ್ರಕಾರ ಅವರು ನಡೆದುಕೊಳ್ಳಬೇಕು. ಯಾರು ಹಾಗೆ ನಡೆದುಕೊಳ್ಳುವುದಿಲ್ಲ, ಅಂತಹವರ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಿ...

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಮಾಡಿದ್ದಾರೆ.

ಪಡುವಾರಹಳ್ಳಿ ಮೈಸೂರು ಪೂರ್ವ ಭಾಗದ ಬಡಾವಣೆಯಲ್ಲಿ ನಗರಾಭಿವೃದ್ಧಿ ವಿಶ್ವಸ್ಥ ಮಂಡಲಿಗೆ ಸೇರಿರುವ ನಿವೇಶನಗಳ ಬಗ್ಗೆ

೨೧೦೭. ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಕೃಷ್ಣರಾಜ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯು ಪಡುವಾರಹಳ್ಳಿ ಬಡಾವಣೆಯಲ್ಲಿ ಎಷ್ಟು ನಿವೇಶನಗಳಿವೆ.

ಆ) ಅವುಗಳಲ್ಲಿ ಎಷ್ಟು ನಿವೇಶನಗಳನ್ನು ಇತ್ಯರ್ಥ ಮಾಡಲಾಗಿದೆ.

ಇ) ಹಾಗಿದ್ದಲ್ಲಿ ಸರ್ಕಾರದವರು ಇತ್ಯರ್ಥ ಮಾಡಲು ಆದೇಶ ನೀಡಿದ್ದಾರೆಯೆ?

ಈ) ಇಲ್ಲದಿದ್ದರೆ ಯಾವ ಕಾರಣಗಳಿಗಾಗಿ ಆದೇಶ ನೀಡಿರುವುದಿಲ್ಲ ಮತ್ತು ನಿವೇಶನಗಳನ್ನು ಮಂಜೂರು ಮಾಡುವಲ್ಲಿ ಯಾವ ಕ್ರಮವನ್ನು ಅನುಸರಿಸಲಾಯಿತು.